## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೆಲವು ನಿರ್ದಿಷ್ಟ ಸೌಲಭ್ಯಗಳ ಮಂಜೂರಾತಿ ಕುರಿತಂತೆ 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಪರಿಶೀಲಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂಖ್ಯೆ: ಆಇ 6 ಎಸ್‌ಆರ್‌ಪಿ 2018 ದಿನಾಂಕ: 01.03.2018.
2. ಸರ್ಕಾರಿ ಆದೇಶ ಸಂಖ್ಯೆ:ಆಇ 24 ಎಸ್‌ಆರ್‌ಪಿ 2018(I) ರಿಂದ (XII) ದಿನಾಂಕ: 11.01.2019.
3. ಸರ್ಕಾರಿ ಆದೇಶ ಸಂಖ್ಯೆ: ಆಇ 01 ಸೇನಿಸೇ 2019 ದಿನಾಂಕ: 11.01.2019.
4. ಸರ್ಕಾರಿ ಆದೇಶ ಸಂಖ್ಯೆ: ಆಇ 02 ಸೇನಿಸೇ 2019 ದಿನಾಂಕ: 11.01.2019.

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರಿ ಆದೇಶಗಳಲ್ಲಿ, ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದಂತೆ, 6ನೇ ರಾಜ್ಯ ವೇತನ ಆಯೋಗದ ವರದಿಯ ಸಂಪುಟ 1 ಮತ್ತು ಸಂಪುಟ 2ರಲ್ಲಿನ ಕೆಲವು ನಿರ್ದಿಷ್ಟ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ.

6ನೇ ರಾಜ್ಯ ವೇತನ ಆಯೋಗವು ತನ್ನ ವರದಿಗಳಲ್ಲಿ ಹಲವಾರು ವಿಷಯಗಳ ಬಗ್ಗೆ ನಿರ್ದಿಷ್ಟ ಶಿಫಾರಸ್ಸುಗಳನ್ನು ಮಾಡಿರುತ್ತದೆ. ಅವುಗಳು;

i. ಜ್ಯೋತಿ ಸಂಜೀವಿನಿ ವೈದ್ಯಕೀಯ ಯೋಜನೆಯನ್ನು ಎಲ್ಲಾ ನಿವೃತ್ತಿ ವೇತನದಾರರು/ ಕುಟುಂಬ ನಿವೃತ್ತಿ ವೇತನದಾರರಿಗೆ ವಿಸ್ತರಿಸುವ ಬಗ್ಗೆ;
ii. ದಿನಾಂಕ: 01.07.2005ಕ್ಕೆ ಪೂರ್ವದಲ್ಲಿ ನಿವೃತ್ತರಾದ ನಿವೃತಿ ವೇತನದಾರರು/ ಕುಟುಂಬ ನಿವೃತ್ತಿ ವೇತನದಾರರ ಪಿಂಚಣಿಯನ್ನು ಪರಿಷ್ಕರಿಸುವ ಬಗ್ಗೆ;
iii. ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರನ್ನು ನೂತನ ಪಿಂಚಣಿ ಯೋಜನೆಯ (ಎನ್.ಪಿ.ಎಸ್.) ವ್ಯಾಪ್ತಿಗೆ ಒಳಪಡಿಸುವ ಬಗ್ಗೆ.

ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ, ವೇತನ ಆಯೋಗದ ಶಿಫಾರಸ್ಸುಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿರುತ್ತದೆ. ಅದರಂತೆ ಈ ಕೆಳಕಂಡ ಆದೇಶಗಳನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 24 ಎಸ್‌ಆರ್‌ಪಿ 2018(XIV)**
**ಬೆಂಗಳೂರು, ದಿನಾಂಕ: 28ನೇ ಮೇ 2019**

ಪ್ರಸ್ತಾವನೆಯಲ್ಲಿ ವಿವರಿಸಿದ ವಿಷಯಗಳಿಗೆ ಸಂಬಂಧಿಸಿದಂತೆ, ಸರ್ಕಾರವು, 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಪರಿಶೀಲಿಸಿದ್ದು, ಅವುಗಳ ಮುಂದೆ ತಿಳಿಸಲಾದ ಕಾರಣದಿಂದ ಈ ಕೆಳಕಂಡ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ;

**I. ಜ್ಯೋತಿ ಸಂಜೀವಿನಿ ವೈದ್ಯಕೀಯ ಯೋಜನೆಯನ್ನು ಎಲ್ಲಾ ನಿವೃತ್ತಿ ವೇತನದಾರರು/ ಕುಟುಂಬ ನಿವೃತ್ತಿ ವೇತನದಾರರಿಗೆ ವಿಸ್ತರಿಸುವ ಬಗ್ಗೆ;**

ಪ್ರಸ್ತುತ ಕಾರ್ಯನಿರತ ನೌಕರರಿಗೆ ಅನ್ವಯಿಸುವ ಜ್ಯೋತಿ ಸಂಜೀವಿನಿ ವೈದ್ಯಕೀಯ ಯೋಜನೆಯನ್ನು ಎಲ್ಲಾ ನಿವೃತ್ತಿ ವೇತನದಾರರು ಮತ್ತು ಕುಟುಂಬ ನಿವೃತ್ತಿ ವೇತನದಾರರಿಗೆ ವಿಸ್ತರಿಸಲು ಹಾಗೂ ಹೊರ ರೋಗಿಯಾಗಿ ಪಡೆದ ರೂ.1000/- ಮೀರಿದ ಮಾಸಿಕ ಚಿಕಿತ್ಸೆಯ ವೆಚ್ಚವನ್ನು ಕುಟುಂಬಕ್ಕೆ ಹಿಂಬರಿಸಲು ಶಿಫಾರಸ್ಸು ಮಾಡಿರುತ್ತದೆ. ವಿಸ್ತೃತ ಪರಿಶೀಲನೆಯಿಂದ, ಆರೋಗ್ಯ ಕರ್ನಾಟಕ ಯೋಜನೆಯಡಿ ನಿಗದಿಪಡಿಸಲಾಗಿರುವ ಸೌಲಭ್ಯಗಳು ಜ್ಯೋತಿ ಸಂಜೀವಿನಿ ಯೋಜನೆಯ ಸೌಲಭ್ಯಗಳಿಗಿಂತ ಹೆಚ್ಚು ಲಾಭದಾಯಕವಾಗಿರುತ್ತದೆ. ಮುಂದುವರೆದು, ಆಯುಷ್ಮಾನ್ ಭಾರತ ಯೋಜನೆಯಡಿ ಉದ್ದೇಶಿಸಿರುವ ವ್ಯಾಪಕ ಸೌಲಭ್ಯಗಳು ಎಲ್ಲರಿಗೂ ಮುಕ್ತವಾಗಿದ್ದು, ಅದನ್ನು ಸೀಮಿತ ಅನ್ವಯಿಕೆಯ ಜ್ಯೋತಿ ಸಂಜೀವಿನಿ ಯೋಜನೆಯಡಿ ವಿಸ್ತರಿಸಲು ಬರುವುದಿಲ್ಲ. ಆದುದರಿಂದ, ವೇತನ ಆಯೋಗದ ಈ ಶಿಫಾರಸ್ಸನ್ನು ಸರ್ಕಾರವು ತಿರಸ್ಕರಿಸುತ್ತದೆ.

**II. ದಿನಾಂಕ: 01.07.2005ಕ್ಕೆ ಪೂರ್ವದಲ್ಲಿ ನಿವೃತ್ತರಾದ ನಿವೃತಿ ವೇತನದಾರರು/ ಕುಟುಂಬ ನಿವೃತ್ತಿ ವೇತನದಾರರ ಪಿಂಚಣಿಯನ್ನು ಪರಿಷ್ಕರಿಸುವ ಬಗ್ಗೆ;**

ದಿನಾಂಕ: 01.12.1985ರ ಪೂರ್ವದಲ್ಲಿ ನಿವೃತ್ತರಾದ ಪಿಂಚಣಿದಾರರ ಹಾಗೂ ದಿನಾಂಕ: 01.07.2005ರ ಪೂರ್ವದಲ್ಲಿ ನಿವೃತ್ತರಾದ ನೌಕರರ ಕುಟುಂಬ ಪಿಂಚಣಿದಾರರ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಅನುಕ್ರಮವಾಗಿ ನಿವೃತ್ತ ನೌಕರನು ಅಂತಿಮವಾಗಿ ಧಾರಣೆ ಮಾಡಿದ ಹುದ್ದೆಗೆ ಅನ್ವಯಿಸುವ ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನದ ಶೇ.50 ಮತ್ತು ಶೇ.30 ಕ್ಕೆ ಪರಿಷ್ಕರಿಸಲು ಆಯೋಗವು ಶಿಫಾರಸ್ಸು ಮಾಡಿರುತ್ತದೆ. ಆದರೆ, ದಿನಾಂಕ: 01.07.2005ಕ್ಕೆ ಪೂರ್ವದಲ್ಲಿ ನಿವೃತ್ತರಾದ/ ಮರಣ ಹೊಂದಿದ/ಸೇವೆಯಲ್ಲಿ ಇಲ್ಲದ ನೌಕರರ ಪಿಂಚಣಿ ಮತ್ತು ಕುಟುಂಬ ಪಿಂಚಣಿಯನ್ನು ತದನಂತರದಲ್ಲಿ ಅಂದರೆ, ದಿನಾಂಕ: 01.07.2005ರಿಂದ ಜಾರಿಗೆ ಬರುವಂತೆ ಪೂರ್ವ ಪರಿಷ್ಕೃತ ಪಿಂಚಣಿ / ಕುಟುಂಬ ಪಿಂಚಣಿಯ ಶೇ.88.5ರಷ್ಟು, ದಿನಾಂಕ: 01.04.2012ರಿಂದ ಜಾರಿಗೆ ಬರುವಂತೆ ಮೂಲ ಪಿಂಚಣಿ/ಕುಟುಂಬ ಪಿಂಚಣಿಯ ಶೇ.99.25ರಷ್ಟು ಮತ್ತು ಇತ್ತೀಚೆಗೆ ದಿನಾಂಕ: 01.07.2017ರಿಂದ ಜಾರಿಗೆ ಬರುವಂತೆ ಶೇ.75.25ರಷ್ಟು ಪರಿಷ್ಕರಣೆ ಮಾಡಲಾಗಿರುತ್ತದೆ. ಮುಂದುವರೆದು, ಈ ಸೌಲಭ್ಯದ ಅನುಷ್ಠಾನದಿಂದ ಊಹಿಸಲಾಗದ ಸಮಸ್ಯೆಗಳು ಉಂಟಾಗಬಹುದು. ಆದುದರಿಂದ, ವೇತನ ಆಯೋಗದ ಶಿಫಾರಸ್ಸನ್ನು ಸರ್ಕಾರವು ತಿರಸ್ಕರಿಸುತ್ತದೆ.

**III. ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರನ್ನು ನೂತನ ಪಿಂಚಣಿ ಯೋಜನೆಯ (ಎನ್.ಪಿ.ಎಸ್.) ವ್ಯಾಪ್ತಿಗೆ ಒಳಪಡಿಸುವ ಬಗ್ಗೆ.**

ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರನ್ನು ನೂತನ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಡಿಸಿ ಸಂಬಂಧಿಸಿದ ಸಂಸ್ಥೆಯ ಆಡಳಿತ ಮಂಡಳಿಯು (ಅವರ ಪಾಲಿನ) ಉದ್ಯೋಗದಾತರ ವಂತಿಗೆಯನ್ನು, ನೂತನ ಪಿಂಚಣಿ ಯೋಜನೆ ನಿಧಿಗೆ ಪಾವತಿಸುವುದನ್ನು ಕಡ್ಡಾಯಗೊಳಿಸುವಂತೆ ವೇತನ ಆಯೋಗವು ಶಿಫಾರಸ್ಸು ಮಾಡಿರುತ್ತದೆ.

ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರನ್ನು ನೂತನ ಪಿಂಚಣಿ ಯೋಜನೆಗೆ ಒಳಪಡಿಸುವ ಆಯೋಗದ ಶಿಫಾರಸ್ಸು ನೌಕರರ ಹಿತಾಸಕ್ತಿಗೆ ಪೂರಕವಾಗಿದ್ದರೂ, ಎನ್.ಪಿ.ಎಸ್. ನಿಧಿಗೆ ಉದ್ಯೋಗದಾತರ ವಂತಿಗೆಯನ್ನು ಪಾವತಿಸುವ ಜವಾಬ್ದಾರಿಯನ್ನು ಖಾಸಗಿ ಅನುದಾನಿತ ಆಡಳಿತ ಮಂಡಳಿಗಳ ಮೇಲೆ ಸರ್ಕಾರವು ಹೇರಲು ಆಗುವುದಿಲ್ಲ. ಏಕೆಂದರೆ, ನೂತನ ಪಿಂಚಣಿ ಯೋಜನೆಯು ಎಲ್ಲಾ ಪ್ರಜೆಗಳಿಗೂ ಮುಕ್ತವಾಗಿದ್ದು, ಇದಕ್ಕೆ ಯಾರು ಬೇಕಾದರೂ ನೋಂದಾಯಿಸಿಕೊಳ್ಳಬಹುದಾಗಿರುತ್ತದೆ. ಮುಂದುವರೆದು, ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರುಗಳು ನಾಗರಿಕ ಸೇವಾ ನೌಕರರುಗಳಾಗಿರುವುದಿಲ್ಲವಾದ್ದರಿಂದ, ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರು ಮತ್ತು ಸರ್ಕಾರದ ನಡುವೆ ನೌಕರ–ಮಾಲೀಕರ ಸಂಬಂಧ ಇರುವುದಿಲ್ಲ. ಆದುದರಿಂದ, ಎನ್.ಪಿ.ಎಸ್. ನಿಧಿಗೆ ಉದ್ಯೋಗದಾತರ ವಂತಿಗೆಯನ್ನು ಪಾವತಿಸುವ ಹೊಣೆಗಾರಿಕೆಯನ್ನು ಸಂಬಂಧಿಸಿದ ಖಾಸಗಿ ಆಡಳಿತ ಮಂಡಳಿಗಳ ವಿವೇಚನೆಗೆ ಬಿಡುವುದು ಸೂಕ್ತವಾಗಿರುತ್ತದೆ. ಅದರಂತೆ, ಈ ಶಿಫಾರಸ್ಸನ್ನು ಒಪ್ಪಲು ಸಾಧ್ಯವಿರುವುದಿಲ್ಲ ಮತ್ತು ಅದನ್ನು ಸರ್ಕಾರವು ತಿರಸ್ಕರಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಸ್.ಜೋಗೋಜೆ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು–2).

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಪ್ರಧಾನ ಮಹಾಲೇಖಪಾಲರು (G&SSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (E&RSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, (ಪಿ.ಬಿ. ನಂ.5329) ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
6. ಎಲ್ಲಾ ಇಲಾಖಾ ಮುಖ್ಯಸ್ಥರು/ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
7. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
8. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
9. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಂ.ಎಸ್., ಕೊಠಡಿ ಸಂಖ್ಯೆ:145'A', ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
12. ವಾರಪತ್ರ/ಶಾಖೆಯ ರಕ್ಷಾ ಕಡತ.

**ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲತಾಣ www.finance.kar.nic.in** ವೀಕ್ಷಿಸಿ.